ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ: 080-22342162 E-mail: nregs-ka@nic.in

ಸಂ/ಗ್ರಾಅಪ/122/ಸಾಪನಿ(ಉಖಾಯೋ) 2013 ದಿನಾಂಕ 09-06-2014

## ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮ ಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹುದ್ದೆ ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ

ಭಾರತ ಸರ್ಕಾರವು ಹೊರಡಿಸಿರುವ ದಿನಾಂಕ:30-6-2011ರ ಸಾಮಾಜಿಕ ಪರಿಶೋಧನಾ ನಿಯಮಗಳು 2011ರಡಿಯಲ್ಲಿ ಕರ್ನಾಟಕ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸಾಮಾಜಿಕ ಪರಿಶೋಧನಾ ನಿಯಮಾವಳಿಗಳನ್ನು ರೂಪಿಸಿ, ದಿನಾಂಕ:10-01-2012ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಕಾಯ್ದೆ ಮತ್ತು ನಿಯಮಗಳನ್ವಯ, ಸಾಮಾಜಿಕ ಪರಿಶೋಧನೆ ಅನುಷ್ಠಾನಗೊಳಿಸಲು ಸ್ವಾಯತ್ತ ಸಂಸ್ಥೆಯೊಂದನ್ನು ರಚಿಸಲಾಗುತ್ತಿದ್ದು, ಸಂಸ್ಥೆಗೆ ಸಂಬಂಧಿಸಿದ ಸಮಗ್ರ ಕಾರ್ಯ ನಿರ್ವಹಣೆಗಾಗಿ ನಿರ್ದೇಶಕರ ಒಂದು ಹುದ್ದೆಯನ್ನು ಸೃಜಿಸಿದೆ. ಸದರಿ ಹುದ್ದೆಯ ನೇಮಕಾತಿಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ.

ನಿರ್ದೇಶಕರ ಹುದ್ದೆಗಾಗಿ ಈ ಕೆಳಕಂಡ ನಿಬಂಧನೆಗಳನ್ವಯ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಿರ್ದೇಶಕರ ಹುದ್ದೆಯು ತಾತ್ಕಾಲಿಕವಾಗಿದ್ದು, ಪ್ರಥಮವಾಗಿ ಎರಡು ವರ್ಷಗಳ ಅವಧಿಯದ್ದಾಗಿರುತ್ತದೆ ಮತ್ತು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತಹದ್ದಾಗಿರುತ್ತದೆ.

**ಅ) ವಯಸ್ಸಿನ ಅರ್ಹತೆಗಳು:**

1) ನಿವೃತ್ತ ನೌಕರರ ವಯಸ್ಸು 65 ವರ್ಷದೊಳಗಿರತಕ್ಕದ್ದು.
2) ಹುದ್ದೆಯ ಹೊಣೆಗಾರಿಕೆ ನಿರ್ವಹಿಸುವಷ್ಟು ದೈಹಿಕ ಸಾಮರ್ಥ್ಯ ಹೊಂದಿರುವುದು. ದೈಹಿಕ ಸಾಮರ್ಥ್ಯದ ಧೃಡೀಕರಣ ಪತ್ರ ಸಲ್ಲಿಕೆ ಕಡ್ಡಾಯವಾಗಿರುತ್ತದೆ.

**ಆ) ಶೈಕ್ಷಣಿಕ ಅರ್ಹತೆಗಳು:**

1) ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಹೊಂದಿರುವುದು. ಹೆಚ್ಚಿನ ವಿದ್ಯಾರ್ಹತೆಗೆ ಮಾನ್ಯತೆ ಇರುತ್ತದೆ.
2) ಪದವಿಗೆ ತತ್ಸಮಾನದ ತಾಂತ್ರಿಕ, ವೈಜ್ಞಾನಿಕ ಇತರೆ ಶೈಕ್ಷಣಿಕ ಅರ್ಹತೆ ಹೊಂದಿರಲೂಬಹುದು.
3) ಕಂಪ್ಯೂಟರ್ ಬಳಕೆಯ ಸಾಮಾನ್ಯ ಪರಿಜ್ಞಾನ ಅಪೇಕ್ಷಣೀಯ.
4) ಆಂಗ್ಲಭಾಷೆ ಮತ್ತು ಸ್ಥಳೀಯ ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವುದು.

## ಇ) ಅನುಭವದ ಅರ್ಹತೆಗಳು

1) ಅಖಿಲ ಭಾರತ ಸೇವೆಯ ನಿವೃತ್ತ ಅಧಿಕಾರಿ ಅಥವಾ ರಾಜ್ಯ ಸೇವೆಯ ಆಯ್ಕೆ ಶ್ರೇಣಿ ನಿವೃತ್ತ ಅಧಿಕಾರಿಯು ಸರ್ಕಾರದ ಉನ್ನತ ಹುದ್ದೆಯಲ್ಲಿ ಕನಿಷ್ಟ 15 ವರ್ಷದ ಅನುಭವ ಹೊಂದಿರುವುದು.

2) ಅವರ ಪೂರ್ಣ ಸೇವಾವಧಿಯಲ್ಲಿ ಕನಿಷ್ಟ 10 ವರ್ಷಗಳು, ಸಾರ್ವಜನಿಕ ಆಡಳಿತ ಮತ್ತು ಕಾರ್ಯನಿರ್ವಾಹಕ ಹುದ್ದೆಯನ್ನು ನಿರ್ವಹಿಸಿದ ಅನುಭವ ಹೊಂದಿರುವುದು.

3) ಕಾರ್ಮಿಕರು, ರೈತರು, ಮಹಿಳೆಯರು, ಗ್ರಾಮಸ್ಥರುಗಳ ಹಕ್ಕು, ಬಾಧ್ಯತೆಗಳ ಹಾಗೂ ಅವುಗಳ ನಿರ್ವಹಣೆಗೆ ಹಾಗೂ ಸಾರ್ವಜನಿಕ ಸಹಭಾಗಿತ್ವದ ಕ್ಷೇತ್ರದಲ್ಲಿ ಅನುಭವ ಹೊಂದಿರುವುದು ಅಪೇಕ್ಷಣೀಯ.

## ಈ) ವಹಿಸಬೇಕಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು :

1) ಈ ಹುದ್ದೆಯು ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿಪಿಆರ್/186(1)/ಎಂಜಿಎನ್‌ಆರ್ ಇಜಿಎ 2011, ಬೆಂಗಳೂರು, ದಿನಾಂಕ:10-1-2012ರ ಭಾಗ – III (1) ರಂತೆ ಜವಾಬ್ದಾರಿ ಮತ್ತು ಉತ್ತರದಾಯಿತ್ವ ಹೊಂದಿರುತ್ತವೆ.

2) ಸಾಮಾಜಿಕ ಪರಿಶೋಧನೆಯ ಮೂಲತತ್ವ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ನೀತಿಗೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಬದ್ಧರಾಗಿರುವುದು.

3) ಆಯ್ಕೆಯಾದವರು ಸಾಮಾಜಿಕ ಪರಿಶೋಧನಾ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಲಸ ನಿರ್ವಹಿಸಬೇಕಾಗಿರುತ್ತದೆ. ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳ ಸಲಹಾ ಸೇವಾ ಒಪ್ಪಂದ ಪತ್ರದನ್ವಯ ಕಾರ್ಯನಿರ್ವಹಿಸಲು ಬದ್ಧರಾಗಿರುವುದು.

4) ಪ್ರಕಟಣೆಯನುಸಾರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ ರಾಜ್ಯಮಟ್ಟದ ಸಮಿತಿಯು ಸಂಕ್ಷೇಪಿತ ಪಟ್ಟಿಯನ್ನಾಧರಿಸಿ ಸೂಕ್ತ ದಿನಾಂಕದಂದು ಅಭ್ಯರ್ಥಿಗಳ ಸಂದರ್ಶನವನ್ನು ಏರ್ಪಡಿಸುವುದು.

**ಪ್ರಸ್ತುತ ನಿಗಧಿಪಡಿಸಲಾಗಿರುವ ಮಾಸಿಕ ಗೌರವ ಸಂಭಾವನೆ ಈ ಕೆಳಕಂಡಂತಿದೆ.**

1) **ರೂ.80000/-ಗಳು** (ರೂ. ಎಂಭತ್ತು ಸಾವಿರ ಮಾತ್ರ) ಮತ್ತು ನಿಯಮಾನುಸಾರ ಪ್ರವಾಸ ಭತ್ಯೆ ಮತ್ತು ಸಂಸ್ಥೆಯೊಂದಿಗಿನ ಒಪ್ಪಂದದಂತೆ ಇತರೆ ಸೌಕರ್ಯ/ಸೌಲಭ್ಯಗಳು.

ಮೇಲ್ಕಂಡ ಸಾಮಾಜಿಕ ಪರಿಶೋಧನಾ ಸಂಸ್ಥೆಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಅರ್ಹ ಅಭ್ಯರ್ಥಿಗಳು ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಅವಶ್ಯಕ ಪೂರಕ ದಾಖಲೆಗಳೊಂದಿಗೆ ಮೊಹರಾದ ಲಕೋಟೆಯಲ್ಲಿರಿಸಿ, ದಿನಾಂಕ:30-06-2014 ರೊಳಗಾಗಿ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇ ಹಂತ, 2ನೇ ಮಹಡಿ, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-560 001 ಇವರಿಗೆ ಖುದ್ದಾಗಿ/ಅಂಚೆ ಮೂಲಕ ತಲುಪುವಂತೆ ಸಲ್ಲಿಸುವುದು. ಅವಧಿ ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(ಮುನೀಶ್ ಮೌದ್ಗಿಲ್) 10/6/14

ಆಯುಕ್ತರು ಗ್ರಾಮೀಣಾಭಿವೃದ್ಧಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ
## (ಮಹಾತ್ಮ ಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
## ಇಲಾಖೆ ಹುದ್ದೆ ನೇಮಕಾತಿಗಾಗಿ ಅರ್ಜಿ ನಮೂನೆ

| | | | |
|---|---|---|---|
| 1) | ಅರ್ಜಿದಾರರ ಹೆಸರು | : | |
| 2) | ಹುಟ್ಟಿದ ದಿನಾಂಕ ಮತ್ತು ವಯಸ್ಸು<br>[ಧೃಡೀಕೃತ ದಾಖಲೆ ಲಗತ್ತಿಸುವುದು] | : | |
| 3) | ಶೈಕ್ಷಣಿಕ ವಿದ್ಯಾರ್ಹತೆ<br>[ಪದವಿ/ಸ್ನಾತಕೋತ್ತರ ಪದವಿಯ ಧೃಡೀಕೃತ ದಾಖಲೆಗಳನ್ನು ಲಗತ್ತಿಸುವುದು] | : | |
| 4) | ಅಂಚೆ ವಿಳಾಸ | : | |
| 5) | ಸ್ಥಿರ ದೂರವಾಣಿ/ಮೊಬೈಲ್ ಸಂಖ್ಯೆ<br>ಇ-ಮೇಲ್ ವಿಳಾಸ | : | |
| 6) | ದೈಹಿಕ ಸಾಮರ್ಥ್ಯ<br>[ಧೃಡೀಕೃತ ಪ್ರತಿ ಲಗತ್ತಿಸುವುದು] | : | |
| 7) | ಕಂಪ್ಯೂಟರ್ ಪರಿಜ್ಞಾನ<br>[ಧೃಡೀಕೃತ ಪ್ರತಿ ಲಗತ್ತಿಸುವುದು] | : | |
| 8) | ಅನುಭವದ ಅರ್ಹತೆಗಳು:-<br>1) ಸರ್ಕಾರದ ಉನ್ನತ ಹುದ್ದೆಯಲ್ಲಿ ಕನಿಷ್ಟ 15 ವರ್ಷಗಳ ಅನುಭವ [ದಾಖಲೆಯನ್ನು ಲಗತ್ತಿಸುವುದು]<br>2) ಪೂರ್ಣ ಸೇವಾವಧಿಯಲ್ಲಿ ಕನಿಷ್ಟ 10 ವರ್ಷಗಳ ಸಾರ್ವಜನಿಕ ಆಡಳಿತ ಮತ್ತು ಕಾರ್ಯನಿರ್ವಾಹಕ ಹುದ್ದೆ ನಿರ್ವಹಿಸಿದ ಅನುಭವ [ದಾಖಲೆಯನ್ನು ಲಗತ್ತಿಸುವುದು] | : | |
| 9) | ಹಾಲಿ ನಿರ್ವಹಿಸುತ್ತಿರುವ ಉದ್ಯೋಗದ ವಿವರ | : | |
| 10) | ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳ ಇಲಾಖಾ ಸೇವಾ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಿಗೆ ಇದೆಯೇ ? | : | |

ಸ್ಥಳ :

ಅಭ್ಯರ್ಥಿಯ ಸಹಿ

ದಿನಾಂಕ :